## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಹದಡಿ ಮತ್ತು ಇತರೆ 16 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ, ಇವರ ಕಡತ ಸಂ:ಗ್ರಾಕುನೀ&ನೈಇ/592/ಮುಇ/ತಾಂತ್ರಿಕ/2021-22.

---

**ಪೀಠಿಕೆ:**

ಮೇಲೆ ಓದಲಾದ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರುರವರ ಕಡತದಲ್ಲಿ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಹದಡಿ ಮತ್ತು ಇತರೆ 16 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಪುನಃಶ್ಚೇತನ (Augmentation) ಕಾಮಗಾರಿಯ **ರೂ.493.00ಲಕ್ಷಗಳ** ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಯೋಜನೆಯ ಕಾಮಗಾರಿಯಲ್ಲಿ ಹೆಚ್ಚುವರಿಯಾಗಿ 3 ಗ್ರಾಮಗಳಾದ ಹನುಮನಹಳ್ಳಿ, ಗೋಪನಾಲು ಮತ್ತು ಚಿಕ್ಕತೊಗಲೇರಿ ಗ್ರಾಮಗಳನ್ನು ಸೇರಿಸಿಕೊಂಡು ಯೋಜನೆಯ ಎಲ್ಲಾ ಗ್ರಾಮಗಳಿಗೂ 55 LPCD ನೀರನ್ನು ಒದಗಿಸುವುದು, ಪೈಪ್‌ಲೈನ್ ಬದಲಾವಣೆ ಮತ್ತು ಹೆಡ್‌ವರ್ಕ್ಸ್ ಮತ್ತು WTPಯ ಪುನಃಶ್ಚೇತನ ಸಲುವಾಗಿ ಅಂದಾಜು ಪಟ್ಟಿಯಲ್ಲಿ ಅನುವು ಮಾಡಿಕೊಳ್ಳಲಾಗಿದೆ. ದಿನಾಂಕ:08.12.2021ರ ಅಪೆಕ್ಸ್ ಕಮಿಟಿಯಲ್ಲಿ 2021-22ನೇ ಸಾಲಿನ JJM ಕಾರ್ಯಕ್ರಮದ ಅಡಿಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ(JJM ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಯನ್ನು ಪರಿಗಣಿಸಲಾಗಿರುತ್ತದೆ).

ಚಾಲ್ತಿ ಪಾರದರ್ಶಕ ನೀತಿಯನ್ವಯ ನಿಯಮಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ದಾವಣಗೆರೆ** ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಉದ್ದೇಶಿತ ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ ಅಂದಾಜು ಮೊತ್ತ **ರೂ.493.00ಲಕ್ಷಗಳಿಗೆ** ಜಲ ಜೀವನ ಮಿಷನ್ (JJM) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ/220/ಗ್ರಾನೀಸ(4)2022 ಬೆಂಗಳೂರು, ದಿನಾಂಕ:31.03.2022**

ಪೀಠಿಕೆಯಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಹದಡಿ ಮತ್ತು ಇತರೆ 16 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ **ರೂ.493.00ಲಕ್ಷ(ನಾಲ್ಕು ನೂರ ತೊಂಭತ್ತ್ಮೂರು ಲಕ್ಷ ರೂಪಾಯಿಗಳು ಮಾತ್ರ) ಗಳ** ಅಂದಾಜು ಮೊತ್ತಕ್ಕೆ ಜಲ ಜೀವನ ಮಿಷನ್ **(JJM)** ಕಾರ್ಯಕ್ರಮದ ಅಡಿಯಲ್ಲಿ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. ಪ್ರಸ್ತಾಪಿತ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಅವಶ್ಯವಿರುವ ಅನುಮೋದನೆ ಪಡೆದು ನಂತರ ಮುಂದಿನ ಕ್ರಮವಹಿಸಬೇಕು. ಅನುಮೋದನೆ ನೀಡಲಾದ ಅಂದಾಜಿನ ವ್ಯಾಪ್ತಿಯೊಳಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು. ಅಂದಾಜು ಮೊತ್ತದಲ್ಲಿ ಯಾವುದೇ ರೀತಿಯ ಹೆಚ್ಚಳಕ್ಕೆ ಆಸ್ಪದ ನೀಡಬಾರದು.

3. ಈ ಆದೇಶದಡಿ ಅನುಮೋದನೆಗೊಂಡ ಕುಡಿಯುವ ನೀರಿನ ಯೋಜನೆಯ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬೆಂಗಳೂರು ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಆಧರಿಸಿ ಅನುದಾನ ಬಿಡುಗಡೆ ಮಾಡಲಾಗುವುದು.

4. ಯೋಜನೆಯನ್ನು ಚಾಲ್ತಿ ಪಾರದರ್ಶಕ (KTPP ಕಾಯ್ದೆಯನ್ವಯ) ನೀತಿಯನ್ವಯ ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ (ಅಭಿವೃದ್ಧಿ),
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ದಾವಣಗೆರೆ.**
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
7. ನಿರ್ದೇಶಕರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.

8. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ದಾವಣಗೆರೆ.**
10. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಂಗಳೂರು.**
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸಂಪಾದಕರು, "ಕರ್ನಾಟಕ ವಿಕಾಸ", ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
14. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ದಾವಣಗೆರೆ.**
15. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು), ಬಹುಮಹಡಿ ಕಟ್ಟಡ, ಬೆಂಗಳೂರು.
16. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ), ಬೆಂಗಳೂರು.
17. ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು), ಬಹುಮಹಡಿ ಕಟ್ಟಡ ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಪತ್ರದ ಸಂಖ್ಯೆ: ಗ್ರಾಕುನೀಸ ಇ/220/ಗ್ರಾನೀಸ(4)2022, ಬೆಂಗಳೂರು ದಿನಾಂಕ: 05.04.2022

# SUMMARY OF COST ABSTRACT

| Sl No | ITEM OF WORK | AMOUNT (Rs.) | TOTAL (Rs.) |
|---|---|---|---|
| I | **Head Works** | | |
| 1 | Chain Pulley & Girder arrangements at Existing Canal Jackwell | 52500.00 | 5089700.00 |
| 2 | Raw water rising main line 300mm dia DI K9 pipe | 2247400.00 | |
| 3 | Flow Meter at Canal Jackwell | 154800.00 | |
| 4 | Electrical Panel Board 25HP at Canal Jackwell | 30000.00 | |
| 5 | Lighting arrangements at canal jack well | 55400.00 | |
| 6 | Staff room at Canal jackwell size 4*3Mtr | 326000.00 | |
| 7 | Stone Pitching for IR | 880000.00 | |
| 8 | Rubber Mat 1mt X 1mt - 10mm thick | 1000.00 | |
| 9 | Eletrical Panel Board 10HP at IR Jackwell. | 13300.00 | |
| 10 | Approach bridge IR to WTP | 1329300.00 | |
| II | **Water Treatment Plant** | | |
| 11 | Construction of Slow Sand Filter 1no.) | 2599100.00 | 3764900.00 |
| 12 | SSF outlet chamber 150mm sluice valve | 24500.00 | |
| 13 | RUBBER MAT 1mt X 1mt - 10mm thick | 1000.00 | |
| 14 | Flow meter(100mm) | 25600.00 | |
| 15 | Trenching at WTP site | 605400.00 | |
| 16 | Staff room at WTP size 4*3Mtr | 326000.00 | |
| 17 | Pure Water Rising main line air valve(80mm) | 183300.00 | |

| Sl No | ITEM OF WORK | AMOUNT (Rs.) | TOTAL (Rs.) |
|---|---|---|---|
| III | **Pure water gravity Feeder Main Pipe line** | | |
| 18 | Pure Water Gravity Main from Chikkathogaleri (4.5KMs) to Village Gopanal Village. | 4335700.00 | |
| 19 | Pure Water Gravity Main from Existing-MBR to Kolakunte Cross 300mm dia DI K7 (7.15Km) | 25406300.00 | 29742000.00 |
| | **Total Basic Cost Excluding GST, in Rs.** | | 38600000.00 |
| | DPR Charges = 7,72,000.00 ~~ADD 12% GST AMOUNT~~ | | 4632000.00 |
| | **Total Basic Cost Including GST, in Rs.** | | 43232000.00 |
| | 47,24,640.00 GST ~~CONTINGENCIES (3%)~~ | | 1296960.00 |
| | 4,40,96,640.00 **Total Basic Cost Including Contingencies, in Rs.** | | 44528960.00 |
| | Contengencies ~~CONSULTENCY CHARGES~~ | | 890579.20 |
| | **Grand Total Cost, in Rs. =** | | 45420000.00 |
| | Population for the Present Year - 2021 | | 32137 |
| | **Per Capita Cost, in Rs.** | | 1414.00 |

Price Escalation 38,60,000.00 1535.00

4,93,00,000.00

ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ. ಮತ್ತು ನೈ. ಉಪ ವಿಭಾಗ
ದಾವಣಗೆರೆ

"ರೂ 4.54.20 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ"

Superintending Engineer,
Rural Drinking Water & Sanitation Circle,
Bengaluru

ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ. ಮತ್ತು ನೈ. ವಿಭಾಗ
ದಾವಣಗೆರೆ

"ಅನುಮೋದಿಸಿದೆ" "ಆಡಳಿತಾತ್ಮಕ ಅನುಮೋದನೆಗೆ ಶಿಫಾರಸು"

Chief Engineer
Rural Drinking Water & Sanitation Department
2nd Floor, 'E' Block, KHB Complex,
Cauvery Bhavan, K. G. Road, Bangalore-9.

ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ, ಬೆಂಗಳೂರು.